ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾ ನಟ ಸಂಚಾರಿ ವಿಜಯ್ ಅವರು ರಸ್ತೆ ಅಪಘಾತದಲ್ಲಿ ಸಾವಿಗೀಡಾದ ಸಂದರ್ಭದಲ್ಲಿ, ಮತ್ತೊಬ್ಬ ನಟ ಪ್ರಥಮ್ 'ಟ್ವಿಟ್ಟರ್'ನಲ್ಲಿ ಮಾಡಿದ ಪೋಸ್ಟ್:

'ನಾನು ಸಾಮಾನ್ಯವಾಗಿ ಗೌರ್ನಮೆಂಟ್ ರೂಲ್ಸ್ ಪಾಲಿಸುತ್ತೇನೆ. ಇನ್ಮೇಲೆ ಕಂಪಲ್ಸರಿ ಪಾಲಿಸುತ್ತೇನೆ. ಟೂ ವ್ಹೀಲರ್ ಸಹಿತ ಎಲ್ಲದರಲ್ಲಿಯೂ ಓಡಾಡ್ತಿರ್ತೀನಿ. ಒನ್‌ವೇ, ಓವರ್‌ಸ್ಪೀಡ್ ಇರಲ್ಲ. ಹೆಲ್ಮೆಟ್ ಮಿಸ್ಸಿಲ್ಲ. ಯಾರು ಈ ಸಮಯದಲ್ಲಿ ಹೇಳ್ತಾರೋ ಇಲ್ವೋ... ನಾನು ಪಾಲಿಸೋದರಿಂದ ಹೇಳ್ತೇನೆ: ಡೋಂಟ್ ಮಿಸ್ ಹೆಲ್ಮೆಟ್.'

ಪ್ರಥಮ್ ಮಾತ್ರವಲ್ಲ, ವಿಜಯ್ ಸಾವಿಗೆ ಮರುಗಿದ ಬಹುತೇಕ ಮಂದಿ, 'ಅವರು ಹೆಲ್ಮೆಟ್ ಹಾಕಿಕೊಂಡಿರಬೇಕಿತ್ತು' ಎನ್ನುವ ಮಾತನ್ನೂ ಆಡಿದರು. ಹೌದು, ದ್ವಿಚಕ್ರ ವಾಹನ ಅಪಘಾತಗಳ ದುರಂತದ ಸಂದರ್ಭದಲ್ಲಿ ಹೆಲ್ಮೆಟ್‌ನ ಮಾತು ಕೇಳಿಬರುವುದು ಸಾಮಾನ್ಯ. ವಿಜಯ್ ಅವರ ಆಕಸ್ಮಿಕ ಸಾವು ಹೆಲ್ಮೆಟ್ ಬಳಕೆಯ ಅಗತ್ಯವನ್ನು ಒತ್ತಿಹೇಳುತ್ತಿರುವ ಹೊಸ ಪ್ರಸಂಗವಷ್ಟೇ.



ಜೀವ ಉಳಿಸಿಕೊಳ್ಳಲು ಹೆಲ್ಮೆಟ್ ಧರಿಸಿ ಎನ್ನುವ ಪಾಠವನ್ನು ದ್ವಿಚಕ್ರ ವಾಹನ ಸವಾರರಿಗೆ ಹೇಳಿ ಕಣ್ಮರೆಯಾದ ಸಂಚಾರಿ ವಿಜಯ್

'ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯೂರೊ' ನೀಡಿರುವ ಅಂಕಿಅಂಶಗಳನ್ನು ಗಮನಿಸಿ: 2018ರಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಸಾವಿಗೀಡಾದವರ ಸಂಖ್ಯೆಯಲ್ಲಿ ದ್ವಿಚಕ್ರ ವಾಹನ ಸವಾರರೇ ಹೆಚ್ಚು (ಶೇ 35.7). ಇವರಲ್ಲಿ ಹೆಲ್ಮೆಟ್ ಧರಿಸದೆ ಅಸುನೀಗಿದವರ ಪ್ರಮಾಣವೇ ಅಧಿಕ. ಕಳೆದ 10 ವರ್ಷಗಳಲ್ಲಿ ದ್ವಿಚಕ್ರ ವಾಹನ ಸವಾರರ ಸಾವಿನ ಸಂಖ್ಯೆ ಶೇ 18ರಷ್ಟು ಹೆಚ್ಚಾಗಿದೆ ಎಂಬ ಆಘಾತಕಾರಿ ವಿವರವೂ, ರಸ್ತೆ ಅಪಘಾತದಲ್ಲಿ ಮೃತಪಡುವವರಲ್ಲಿ ದ್ವಿಚಕ್ರ ವಾಹನ ಸವಾರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇರುವುದನ್ನೂ ಕ್ರೈಂ ರೆಕಾರ್ಡ್ ಬ್ಯೂರೊ ದತ್ತಾಂಶಗಳು ಒತ್ತಿಹೇಳುತ್ತಿವೆ.

ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಕಾನೂನುಗಳೇನೋ ನಿರಂತರವಾಗಿ ಪರಿಷ್ಕೃತಗೊಳ್ಳುತ್ತಿವೆ. ಹೆಲ್ಮೆಟ್ ಧರಿಸದಿದ್ದರೆ ಇರುವ ದಂಡ ₹1000ಕ್ಕೆ ಹೆಚ್ಚಳವಾಗಿದೆ. ಆದರೆ ರಾಜಕೀಯ ಹಸ್ತಕ್ಷೇಪ, ಹೆಲ್ಮೆಟ್ ಧರಿಸಲು ನಿರಾಸಕ್ತಿ, ಹೆಲ್ಮೆಟ್ ಧರಿಸಿದರೆ ಹಲವು ತೊಂದರೆಗಳಾಗಬಹುದು ಎಂಬ ಅಪನಂಬಿಕೆ, ನಿಷ್ಕಾಳಜಿ, ಇವೆಲ್ಲ ಕಾರಣಗಳು ಸೇರಿಕೊಂಡು ಭಾರತದಲ್ಲಿ ಇಂದಿಗೂ ಹೆಲ್ಮೆಟ್ ಧರಿಸುವವರ ಸಂಖ್ಯೆ ಶೇ 20 ದಾಟಿಲ್ಲ.

ಮಹಾನಗರಗಳಲ್ಲಿ ಕಟ್ಟುನಿಟ್ಟಿನ ಕ್ರಮದಿಂದ ಹಿಂಬದಿ ಸವಾರ ಕೂಡ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವ ಪ್ರಯತ್ನವೇನೋ ನಡೆದಿದೆ. ಆದರೆ ಇತರ ನಗರಗಳು ಮತ್ತು ಗ್ರಾಮೀಣ ಭಾಗಗಳಲ್ಲಿ ಹೆಲ್ಮೆಟ್ ಅನ್ನುವುದು ಪೊಲೀಸರ ದಂಡದಿಂದ ತಪ್ಪಿಸಿಕೊಳ್ಳುವ ಸಾಧನವೇ ಹೊರತು, ವೈಯಕ್ತಿಕ ಸುರಕ್ಷತೆಗಾಗಿ ಅಲ್ಲವೇ ಅಲ್ಲ ಎಂದು ನಂಬಿರುವವರೇ ಹೆಚ್ಚು.

'ಬದುಕುಳಿದರೆ ಬೆಲ್ಲವನ್ನು ಬೇಡಿಯಾದರೂ ತಿನ್ನಬಹುದು' ಎಂಬ ಮಾತು ಕೋವಿಡ್ ಸೋಂಕು ವ್ಯಾಪಿಸಿದ ಸಂದರ್ಭದಲ್ಲಿ ಹಲವೆಡೆ ಕೇಳಿಬರುತ್ತಿತ್ತು. ಆದರೆ ಶಿರಸ್ತ್ರಾಣ ಧಾರಣೆಗೆ ಮಾತ್ರ ಈ ಮಾತು



ಹೆಲ್ಮೆಟ್ ಧರಿಸುವ ಪಾಠ ಬಾಲ್ಯದಿಂದಲೇ ಆರಂಭವಾಗಬೇಕು.



ಬೆಂಗಳೂರಿನಲ್ಲಿ ನಡೆದ ರಸ್ತೆ ಸುರಕ್ಷತಾ ಕಾರ್ಯಕ್ರಮವೊಂದರಲ್ಲಿ ಯುವತಿಗೆ ಹೆಲ್ಮೆಟ್ ತೊಡಿಸುತ್ತಿರುವ ಗಣೇಶ ವೇಷಧಾರಿ.